

ಕಾಲ ಹೀಗೂ ಬದಲಾಗಬಹುದು ಅಂತ ಗೊತ್ತಿರಲಿಲ್ಲ ಬಿಡಿ. ಮೊದಲೆಲ್ಲ ಯಾರಾದರೂ ಹತ್ತಿರದ ನೆಂಟರಿಷ್ಟರು ತಮ್ಮ ತಮ್ಮ ಮನೆಯ ಮದುವೆಗೋ, ಗೃಹಪ್ರವೇಶಕ್ಕೋ ಸೀರೆ ಕೊಟ್ಟು ಹೋಗುತ್ತಿದ್ದಂತೆ ಖುಷಿಯಿಂದ ಕುಣಿದಾಡುತ್ತಾ ಕವರ್ ಅನ್ನು ಪರಪರ ಹರಿದು ಯಾವ ತರಹದ ಸೀರೆ, ಅಂಚು ಹೇಗಿದೆ, ಬ್ಲೌಸ್ ಪೀಸ್ ಯಾವ ಕಲರ್ ಬಂದಿದೆ, ಈಗ ಕೊಟ್ಟರೆ ಟೈಲರ್ ಯಾವಾಗ ಹೊಲಿದು ಕೊಡಬಹುದು ಎಂದೆಲ್ಲಾ ಲೆಕ್ಕ ಹಾಕುತ್ತಿದ್ದ ಕಾಲವೊಂದಿತ್ತು.

ಈಗೆಲ್ಲ ಬಹುತೇಕ ಹೆಣ್ಣುಮಕ್ಕಳು ಸೀರೆಯಿಂದ ಚೂಡಿ, ಪಲಾಜೊ, ಜೀನ್ಸ್, ಕುರ್ತಾಗಳಿಗೆ ಶಿಫ್ಟ್ ಆಗಿರುವುದರಿಂದ ದಿನದಿನಕ್ಕೆ ಸೀರೆ ಉಡುವವರು ಕಡಿಮೆ ಎನ್ನಬೇಕು. ಕೇವಲ ಸಮಾರಂಭಗಳಲ್ಲಿ ಸೀರೆ ಉಡುವುದರಿಂದ, ಕೊಂಡರೆ ಬೆಲೆಬಾಳುವ ಸೀರೆಗಳನ್ನೇ ಕೊಳ್ಳುತ್ತಾರೆ.

ಹಾಗಾಗಿ ಈಗ ಯಾರಾದರೂ ಸೀರೆ ಕೊಟ್ಟರೆ ಯಾಕಾದರೂ ಕೊಡುತ್ತಾರಪ್ಪಾ, ಇವುಗಳನ್ನು ವಿಲೇವಾರಿ ಮಾಡುವುದು ಹೇಗೆ ಎನ್ನುವ ಚಿಂತೆಯೇ ಹೆಚ್ಚು ಕಾಡುತ್ತದೆ. ಬಟ್ಟೆ ಅಂಗಡಿಗಳಲ್ಲಿ ಮುಯ್ಯಿ ಮಾಡುವ ಸೀರೆಗಳೆಂದೇ ಸಿಗುವ ಇವುಗಳನ್ನು ಕೆ.ಜಿ. ಲೆಕ್ಕಕ್ಕೆ ತಂದಿರುತ್ತಾರೆ. ತೆಗೆದು ನೋಡುವ ಮನಸ್ಸು ಇರದಿದ್ದರೂ ಅದು ಯಾವ ರೀತಿ ಯಾರಿಗೆ ಅಥವಾ ಯಾವುದಕ್ಕೆ ಉಪಯೋಗವಾಗಬಹುದು ಎನ್ನುವ ಲೆಕ್ಕಾಚಾರ ಶುರುವಾಗುತ್ತದೆ.

ಕೊಟ್ಟಿರುವ ನೂರು ರೂಪಾಯಿ ಸೀರೆಗೆ, ಐದು ನೂರು ರೂಪಾಯಿ ಹೊಲಿಯುವ ಕೂಲಿ, ಫಾಲ್ಸು, ಒಳಲಂಗ ಅಂತೆಲ್ಲ ಸಾವಿರ ರೂಪಾಯಿ ಖರ್ಚು ಮಾಡುವಷ್ಟು ಮೂರ್ಖತನ ಯಾರೂ ಮಾಡುವುದಿಲ್ಲ. ಹಾಗಾಗಿ ಉಡುವುದಂತೂ ದೂರದ ಮಾತು. ಇನ್ನು ನೆಲ ಒರೆಸಲು ನೀರು ಇಂಗುತ್ತದೆಯಾ, ಹಬ್ಬ ಹರಿದಿನಗಳಲ್ಲಿ ಡೆಕೋರೇಷನ್‌ಗೇನಾದರೂ ಉಪಯೋಗವಾಗುತ್ತದೆಯಾ ಅಂತೆಲ್ಲ ಒಮ್ಮೆ ಸ್ಕ್ಯಾನ್ ಮಾಡಿ, ಕೊನೆಗೆ ಮನೆ ಕೆಲಸದಾಕೆಗಾದರೂ ಕೊಡುವುದಕ್ಕೆ ಲಾಯಕ್ಕಿದೆಯಾ ಅಂತ ಯೋಚಿಸಬೇಕು. ಅವರೂ ಕೂಡ ಇಂತಹ ಮಸಿಬಟ್ಟೆಗೂ ಲಾಯಕ್ಕಿಲ್ಲದ ಸೀರೆಯನ್ನು ತೆಗೆದುಕೊಳ್ಳಲು ಒಪ್ಪುವುದು ಅನುಮಾನವೇ. ಇದರ ಬದಲಿಗೆ ನಿಮ್ಮದೇ ಫಾಲ್ಸು, ಗೊಂಡೆ, ಒಳಲಂಗ ರೆಡಿ ಇರುವ ಸೀರೆ ಇದ್ದರೆ ಕೊಟ್ಬುಡಿ ಎನ್ನುವವರೇ ಹೆಚ್ಚು.

ಬರೀ ಅಂತಿಂತಹ ಸೀರೆಗೆ ಮಾತ್ರ ನಿರಾಕರಿಸುತ್ತಾರೆ ಅಂತ ಹೇಳುತ್ತಿದ್ದೇನೆ ಎಂದುಕೊಳ್ಳಬೇಡಿ. ಒಳ್ಳೆಯ ಸೀರೆ ಕೊಟ್ಟರೂ ನಿರಾಕರಿಸುವುದಿದೆ ಎಂದು ಹೇಳಿದರೆ ಅಚ್ಚರಿಪಡುತ್ತೀರಿ. ಇತ್ತೀಚೆಗೆ ಒಬ್ಬರ ಗೃಹಪ್ರವೇಶಕ್ಕೆ ಹೋದಾಗ, ಮನೆ ಕಟ್ಟಿಸಿದ ತಮ್ಮ ತನ್ನ ಅಕ್ಕನಿಗೆ ಒಳ್ಳೆಯ ಸೀರೆಯನ್ನೇ ತಂದಿದ್ದ.